230(112) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ)

ವಿಷಯ ದೇವಸ್ಥಾನಗಳ ಅಭಿವೃದ್ಧಿ

ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಮೈಸೂರು ನಗರ ಹಾಗೂ ತಾಲ್ಲೂಕಿನಲ್ಲಿ ಮುಜರಾಯಿ ಇಲಾಖೆಗೆ ಸೇರಿದ ದೇವಾಲಯಗಳೆಷ್ಟು (ವಿವರ ನೀಡುವುದು)

ಆ) 2006-07ನೇ ಸಾಲಿನಲ್ಲಿ ಈ ದೇವಾಲಯಗಳಿಂದ ಬಂದಿರುವ ಆದಾಯ ಎಷ್ಟು?

ಇ) ಈ ದೇವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಹಾಗೂ ಅರ್ಚಕರ ಸಂಖ್ಯೆ ಎಷ್ಟು (ವಿವರ ನೀಡುವುದು)

ಈ) 2006-07ನೇ ಸಾಲಿನಲ್ಲಿ ದೇವಾಲಯ ಅಭಿವೃದ್ಧಿಗಾಗಿ ಕೈಗೊಳ್ಳಲಾದ ಕಾಮಗಾರಿಗಳಾವುವು ಹಾಗೂ ಇದಕ್ಕೆ ತಗಲಿದ ವೆಚ್ಚವೆಷ್ಟು;

ಉ) ಈ ದೇವಾಲಯಗಳಲ್ಲಿನ ಸಿಬ್ಬಂದಿ/ ಅರ್ಚಕರುಗಳಿಗೆ ಸಂಬಳ/ ಸಂಭಾವನೆ ಹೆಚ್ಚಿಸುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ನಾಗರಾಜ್ ಶೆಟ್ಟಿ

ಅ) ಮೈಸೂರು ನಗರದಲ್ಲಿ 20 ಮತ್ತು ಮೈಸೂರು ತಾಲ್ಲೂಕಿನಲ್ಲಿ313 ಮುಜರಾಯಿ ಅಧಿಸೂಚಿತ ಸಂಸ್ಥೆಗಳು ಇರುತ್ತವೆ. (ಅನುಬಂದ-1 ರಲ್ಲಿ ಮಾಹಿತಿ ಒದಗಿಸಿದೆ)

2006-07ನೇ ಸಾಲಿನಲ್ಲಿ ಒಟ್ಟು ರೂ.5.18.07.698-00ಗಳ ಆದಾಯ ಬಂದಿರುತ್ತದೆ.

ಆ) ಸಿಬ್ಬಂದಿ ಮತ್ತು ಅರ್ಚಕರ ಒಟ್ಟು ಸಂಖ್ಯೆ 468.

(ವಿವರ ಅನುಬಂಧ– 11ರಲ್ಲಿ ಲಗತ್ತಿಸಿದೆ)

ಈ) (1) ಆರಾದನಾ ಯೋಜನೆಯಲ್ಲಿ ನಗರ ಪ್ರದೇಶದಲ್ಲಿ 12 ಕಾಮಗಾರಿಗಳನ್ನು ಪೂರ್ಣಗೊಳಿಸಿ ರೂ.3.67.476–00 ಗಳನ್ನು ವೆಚ್ಚ ಮಾಡಲಾಗಿದೆ.

(2) ಸರ್ಕಾರಿ ಸಹಾಯಧನೆ ಯೋಜನೆಯಲ್ಲಿ ನಗರ ಪ್ರದೇಶದಲ್ಲಿನ 5 ಕಾಮಗಾರಿಗೆ ರೂ.1.10.000–00ಗಳನ್ನು ವೆಚ್ಚ ಮಾಡಲಾಗಿದೆ.

(3) ಅರಮನೆ ಮುಜರಾಯಿ ಸಂಸ್ಥೆಗಳಿಗೆ ಸೇರಿದಂತೆ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಕಾಮಗಾರಿಗಳಿಗೆ ರೂ63.62.037–00ಗಳನ್ನು ವೆಚ್ಚ ಮಾಡಲಾಗಿದೆ.

(4) ಶ್ರೀ ನಂಜರಾಜಬಹದ್ದೂರ್ ಛತ್ರ ಮೈಸೂರು, ಈ ಸಂಸ್ಥೆಯ ಅಭಿವೃದ್ಧಿ ಮತ್ತು ಸಣ್ಣಪುಟ್ಟ ದುರಸ್ತಿಗಾಗಿ ರೂ.10.95.631–00 ಗಳನ್ನು ವೆಚ್ಚ ಮಾಡಲಾಗಿದೆ.

ಉ) ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ದರ್ಮಾದಾಯ ದತ್ತಿಗಳ ಅಧಿನಯಮ 1997 ಮತ್ತು ಇದರಡಿಯಲ್ಲಿ ರಚಿಸಲಾದ ನಯಮ –2002ರಲ್ಲಿನ ನಯಮ–34 (2) (ಬಿ) ಪ್ರಕಾರ ಸಂಸ್ಥೆಯ ನವ್ವಳ ಆದಾಯದ ಶೇಕಡ 35ನ್ನು ಮೀರದಂತೆ ಅರ್ಚಕರಿಗೆ ಮತ್ತು ದೇವಸ್ಥಾನದ ಇತರ ನೌಕರರಿಗೆ ವೇತನವನ್ನು ಆಯಾಯ ದೇವಸ್ಥಾನದ ಇತರ ನೌಕರರಿಗೆ ವೇತನವನ್ನು ಆಯಾಯ ದೇವಸ್ಥಾನದ ಆದಾಯಕ್ಕನುಗುಣವಾಗಿ ನಿಗದಿಪಡಿಸಲಾಗುತ್ತದೆ.